ಮೈಸೂರ ಗೆಜೆಟ.

ನಂ. 5] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಜನವರಿ ತಾ|| 31, ಸ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು ಇನ್‌ಸ್ಪೆಕ್ಟರ ಜನರಲ್‌ಯವರು, ರಜಿಸ್ಟ್ರೇಷನ್ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ||ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಪ್ರತಿ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 20ನೇ ಜನವರಿ 1895.

ನಂ. 418—D. H. O. 1895ನೇ ಇಸವಿ ಫಿಬ್ರವರಿ 1ನೇ ಮುಕ್ಕಂ ಶುಕ್ರವಾರ ದಿವಸ ನಡೆಯುವ ಶ್ರೀಮ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಪಟ್ಟಾಭಿಷೇಕಮಹೋತ್ಸವದ ಮರ್ಯಾದಾರ್ಥವಾಗಿ ಈ ಸಂಸ್ಥಾನದ ತಮಾಮ್ ಪಬ್ಲಿಕ್ ಆಫಿಸಗಳೂ ಕೋರ್ಟುಗಳೂ ವ ಸ್ಕೂಲ್‌ಗಳೂ ಸುದಾ 1895ನೇ ಇಸವಿ 30ನೇ ಜನವರಿ ಬುಧವಾರದಾರಭ್ಯ ಫಿಬ್ರವರಿ 2ನೇ ಶನಿವಾರ ಪರ್ಯಂತ (ಉಭಯದಿವಸಗಳೂ ಶೇರಿ) ಬರಖಾಸ್ತು ಮಾಡಲ್ಪಡತಕ್ಕದ್ದು.

2. ಸದರೀ ಕಾಲದಲ್ಲಿ ಜರೂರಿಯಾತ್ ಕೆಲಸ ನಡೆಯುವ ಬಗ್ಯಾಗಿ ಆಯಾ ಇಲಾಖೆ ಮೊಖ್ತೇಸರರು ತಕ್ಕ ಏರ್ಪಾಡು ಮಾಡತಕ್ಕದ್ದು.

3. ಸರ್ಕಾರ್ ಖಜಾನೆಗಳ ವಿಷಯದಲ್ಲಿ, ಕಾಂಟ್ರೋಲರವರು ಜನರುಗಳಿಗೆ ಅನಾನುಕೂಲವಾಗದ ರೀತ್ಯಾ ಅವಶ್ಯಕವಾದ ಹುಕುಂ ಕೊಡತಕ್ಕದ್ದು.

ಹುಕುಂ ಬಮೋಜಿಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟೆರಿ.